**2ನೇ ಅಪರ ಸಿ.ಜೆ. ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮದ್ದೂರು**

ಅಸಲು ದಾವೆ ಸಂಖ್ಯೆ. **89/2011**

ಪಿ ಡಬ್ಲ್ಯೂ **-3** ಹಜೀರಾ ಖಾನಂ

**ದಿಃ22.07.2021 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ ಎ ಜಿ ವಕೀಲರವರಿಂದಃ-**

**1.** ವಾದಿ ನನಗೆ ಸುಮಾರು 25 ವರ್ಷಗಳಿಂದ ಪರಿಚಯ. ಅವರು ನಮ್ಮ ಸಂಬಂಧಿಕರಲ್ಲ. ಈ ದಾವೆಯನ್ನು ವಾದಿಯ ಅಣ್ಣ ಹಿದಾಯತ್ ಉಲ್ಲಾ ಖಾನ್ ಹಾಕಿರುತ್ತಾರೆ. ಹಿದಾಯತ್ ಉಲ್ಲಾ ಖಾನ್ ವಾದಿ ಮದುವೆ ಮಾಡುವ ಸಂದರ್ಭದಲ್ಲಿ ದಾವಾ ಜಮೀನನ್ನು ಮಾರಾಟ ಮಾಡಿ, ಅದರಲ್ಲಿ ಬಂದಂತಹ ಹಣದಿಂದ ವಾದಿಯ ಮದುವೆ ಮಾಡಬೇಕೆಂದು ಕೇಳಿದರು. ಹಾಗಾಗಿ ಈ ಕೇಸನ್ನು ಹಾಕಿದ್ದಾರೆ. ಮುಬೀನಾ ಬಾನು ವಾದಿಯ ತಂದೆಗೆ ಎಷ್ಟು ಆಸ್ತಿ ಎಂದು ಗೊತ್ತು. ವಾದಿಯ ತಂದೆಗೆ ಹೂತಗೆರೆಯಲ್ಲಿ ಒಂದು ಗದ್ದೆ, ಗೆಜ್ಜಲಗೆರೆಯಲ್ಲಿ ಜಮೀನು, ಮದ್ದೂರಿನ ಮುಸ್ಲಿಂ ಬ್ಲಾಕ್ ಮನೆ ಹಾಗೂ ಅದರ ಮುಂದಿನ ಜಾಗವಿತ್ತು. ವಾದಿಯ ತಂದೆಗೆ 3 ಮನೆ ಹಾಗೂ ಆ ಮನೆಗಳ ಮುಂದಿನ ಸೈಟಿತ್ತು. ವಾದಿಯ ಅಣ್ಣತಮ್ಮಂದಿರು ವಿಭಾಗವಾದ ವಿಷಯ ಗೊತ್ತಿಲ್ಲ. ನಾನು ಅವರ ಭಾಗ ಆಗುವ ವಿಷಯದಲ್ಲಿ ಸೇರಿರಲಿಲ್ಲ. ನನಗೆ ವಾದಿಯ ಮನೆಯ ವಿಚಾರ ಗೊತ್ತು. ವಾದಿಯ ಅಣ್ಣತಮ್ಮಂದಿರು ಒಟ್ಟಿಗೆ ಇದ್ದಾರೋ ಅಥವಾ ಆಸ್ತಿ ಹಂಚಿಕೊಂಡಿದ್ದಾರೋ ನನಗೆ ಗೊತ್ತಿಲ್ಲ.

2. ವಾದಿ ನಮ್ಮ ಪಕ್ಕದಮನೆಯವರಾಗಿದ್ದರಿಂದ ಅವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಒ**

(ಆದಿತ್ಯ ಆರ್ ಕಲಾಲ್)

**2ನೇ ಅಪರ ಸಿವಿಲ್ ನ್ಯಾಯಾಧೀಶರು**

**ಮದ್ದೂರು.**